ಒಬ್ಬ ರಾಜನು ಹತ್ತು ಕ್ರೂರವಾದ ನಾಯಿಗಳನ್ನು ಸಾಕಿದ್ದನು. ತನ್ನ ಮಂತ್ರಿಗಳಲ್ಲಿ ಯಾರಾದರೂ ತನ್ನನ್ನು ದಾರಿ ತಪ್ಪಿಸುವ ಕೆಲಸ ಮಾಡಿದರೆ, ಅಥವಾ ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದಿದ್ದರೆ, ಅವರನ್ನು ಶಿಕ್ಷಿಸುವುದಕ್ಕೆ ಈ ನಾಯಿಗಳನ್ನು ಉಪಯೋಗಿಸುತ್ತಿದ್ದನು. ಒಮ್ಮೆ ಮಂತ್ರಿಯೊಬ್ಬ ಪ್ರಜೆಗಳಿಗೆ ಮಾರಕವಾಗುವ ಕೆಲಸವೊಂದನ್ನು ಮಾಡಿದ್ದನು. ಉಳಿದ ಮಂತ್ರಿಗಳು ಹಾಗೂ ಪ್ರಜೆಗಳಿಂದ ಆ ಮಂತ್ರಿಯ ವಿರುದ್ಧ ದೂರು ಬಂದಾಗ, ರಾಜನು ಅವನನ್ನು ಕ್ರೂರ ನಾಯಿಗಳಿಂದ ಹಿಂಸಿಸುವಂತೆ ಆಜ್ಞಾಪಿಸಿದನು.

ಆಗ ಆ ಮಂತ್ರಿಯು ರಾಜನನ್ನು ಕುರಿತು–'ಸ್ವಾಮಿ, ನಾನು ಹತ್ತು ವರ್ಷಗಳಿಂದ ತಮಗೆ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದೇನೆ. ಏನೋ ಅಚಾತುರ್ಯದಿಂದ ಈ ತಪ್ಪು ಆಗಿದೆಯೇ ಹೊರತು ನಾನು ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲ. ಹಾಗಿದ್ದೂ ತಾವು ಹೀಗೆ ಮಾಡುವುದು ಸರಿಯೇ?' ಎಂದು ಕೇಳಿದನು. ರಾಜ ಯಾವುದೇ ಪ್ರತಿಕ್ರಿಯೆ ನೀಡದಿದ್ದಾಗ ಮಂತ್ರಿಯು 'ಆಯಿತು. ನನಗೆ ಹತ್ತು ದಿನ ಸಮಯಾವಕಾಶ ಕೊಟ್ಟು ನಂತರ ಬೇಕಿದ್ದರೆ ನಾಯಿಗಳಿಗೆ ಆಹಾರವಾಗಿ ಕೊಡಿ' ಎಂದು ಬೇಡಿಕೊಂಡನು. ಆಗ ರಾಜನು, 'ಹತ್ತು ದಿನ ಸಮಯ ಕೊಡುತ್ತೇನೆ. ಆದರೆ ನಿನಗೆ ಕೊಟ್ಟ ಶಿಕ್ಷೆಯನ್ನು ಮಾತ್ರ ಹಿಂದಕ್ಕೆ ಪಡೆಯುವುದಿಲ್ಲ' ಎಂದನು. ಮಂತ್ರಿಯು 'ಹಾಗೆಯೇ ಆಗಲಿ' ಎಂದು ಹೇಳಿ ಮನೆಗೆ ನಡೆದನು.

ವಿಷಯ ತಿಳಿದ ಮಂತ್ರಿಯ ಮಡದಿ ಮಕ್ಕಳು ಗೋಳಾಡತೊಡಗಿದರು. ಆಗ ಮಂತ್ರಿಯು ಅವರಿಗೆ ಸಮಾಧಾನ ಮಾಡುತ್ತಾ, 'ನಾನು ಹತ್ತು ದಿನಗಳ ಕಾಲ ಮನೆಯಲ್ಲಿ ಇರುವುದಿಲ್ಲ. ಯಾರೂ ಬಂದು ಕೇಳಿದರೂ ಏನೂ ಗೊತ್ತಿಲ್ಲವೆಂದು ತಿಳಿಸಿ' ಎಂದು ಹೇಳಿ ಎಲ್ಲಿಗೋ ಹೋಗಿಬಿಟ್ಟನು.

ಮೊದಲೇ ಅಂದುಕೊಂಡಂತೆ ಮಂತ್ರಿಯು ಆ ಹತ್ತು ಕ್ರೂರ ನಾಯಿಗಳನ್ನು ನೋಡಿಕೊಳ್ಳುವ ವ್ಯಕ್ತಿಯ ಬಳಿ ಹೋಗಿ, ಹತ್ತು ದಿನಗಳ ಕಾಲ ನಾಯಿಗಳ ಸೇವೆ ಮಾಡುವುದಾಗಿ ಹೇಳಿದನು. ಆಶ್ಚರ್ಯವಾದರೂ ಆತ ಆಗಲಿ ಎಂದು ಒಪ್ಪಿಕೊಂಡನು. ಮಂತ್ರಿಯು ನಾಯಿಗಳಿಗೆ ಪ್ರೀತಿ ತೋರಿಸುತ್ತಾ ಆಹಾರ ಕೊಡುವುದು, ಮೈ ತೊಳೆಯುವುದು ಮುಂತಾದ ಎಲ್ಲ ರೀತಿಯ ಕೆಲಸಗಳನ್ನು ಮಾಡಿ ಅವುಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾ ಬಂದನು. ಹೀಗೆ ಹತ್ತು ದಿನಗಳು ಕಳೆದುಹೋದವು.

ಹತ್ತು ದಿನಗಳು ಕಳೆದ ಬಳಿಕ, ರಾಜನು ಆ ನಾಯಿಗಳ ಗುಂಪಿಗೆ ಮಂತ್ರಿಯನ್ನು ಆಹಾರವಾಗಿ ಕೊಡಬೇಕೆಂದು ಆಜ್ಞಾಪಿಸಿದನು. ಎಲ್ಲರೂ ಕುತೂಹಲದಿಂದ ನೋಡುತ್ತಿರಲು ಆ ನಾಯಿಗಳು ಮಂತ್ರಿಗೆ ತೊಂದರೆ ಕೊಡುವುದರ ಬದಲು ಬಾಲ ಅಲ್ಲಾಡಿಸುತ್ತಾ ಪ್ರೀತಿ ತೋರಿಸಲು ಪ್ರಾರಂಭಿಸಿದವು. ರಾಜನಿಗೆ ಆಶ್ಚರ್ಯವಾಗಿ, 'ನೀನು ಏನು ಮೋಡಿ ಮಾಡಿದೆ' ಎಂದು ಮಂತ್ರಿಯನ್ನು ಕೇಳಿದಾಗ ಮಂತ್ರಿಯು, 'ಸ್ವಾಮಿ ನಾನು ಕೇವಲ ಹತ್ತು ದಿನಗಳ ಕಾಲ ನಾಯಿಗಳ ಸೇವೆ ಮಾಡಿದ್ದಕ್ಕೆ ಅವು ಇಷ್ಟು ಪ್ರೀತಿ ತೋರಿಸುತ್ತಿವೆ. ನಿಮ್ಮ ಬಳಿ ಹತ್ತು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರೂ ಒಂದು ಸಣ್ಣ ತಪ್ಪಿಗೆ ತಾವು ಶಿಕ್ಷಿಸಲು ಹೊರಟಿದ್ದೀರಿ' ಎಂದನು.

ರಾಜನಿಗೆ ತನ್ನ ತಪ್ಪಿನ ಅರಿವಾಯಿತು. ಮಂತ್ರಿಯನ್ನು ಕ್ಷಮಿಸಿ ತನ್ನ ಸೇವೆಯಲ್ಲಿ ಮುಂದುವರಿಯುವಂತೆ ಅಪ್ಪಣೆಯಿತ್ತು. ತನ್ನ ಕಣ್ಣು ತೆರೆಸಿದ್ದಕ್ಕೆ ಅವನಿಗೆ ಬಹುಮಾನ ನೀಡಿ ಸನ್ಮಾನಿಸಿದನು.

(ಆಧಾರ)